ಸರ್ಕಾರಿ ಉಪಕರಣಾಗಾರ ತರಬೇತಿ ಕೇಂದ್ರದಲ್ಲಿ ಸಬ್ ಕಾಂಟ್ರಾಕ್ಟ್

2118 (2527) ಶ್ರೀ ಪಾಟೀಲ್ ಸಿದ್ದಲಿಂಗನಗೌಡ ಸಿದ್ದನಗೌಡ (ಮುಂಡರಗಿ): ಮಾನ್ಯ ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರದಲ್ಲಿ ಸಾಕಷ್ಟು ಕೆಲಸಗಾರರಿದ್ದು ಅವರೇ ಕೆಲಸವಿಲ್ಲದೇ ಕೈ ಕಟ್ಟಿ ಕುಳಿತಿರುವಾಗ ಸಬ್ ಕಾಂಟ್ರಾಕ್ಟ್ ಆಧಾರದ ಮೇಲೆ ಉಪ ಗುತ್ತಿಗೆದಾರರಿಗೆ ಕೆಲಸವನ್ನು ನಿರ್ವಹಿಸುತ್ತಿರುವುದು ನಿಜವೇ;

ಆ) ನಿಜವಿದ್ದಲ್ಲಿ, ಸಾಕಷ್ಟು ಕೆಲಸಗಾರರು ನಿರುದ್ಯೋಗಿಗಳಾಗಿ ಕುಳಿತಿದ್ದರೂ ಸಹ ಉಪ ಗುತ್ತಿಗೆದಾರರಿಗೆ ಕೊಡುವ ಉದ್ದೇಶವೇನು;

ಇ) ಸಬ್ ಕಾಂಟ್ರಾಕ್ಟ್ ಕೊಡುವಲ್ಲಿ ಸಾಕಷ್ಟು ಅವ್ಯವಹಾರಗಳು ನಡೆದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಸದರಿ ಕಾರ್ಯಾಗಾರ ನಷ್ಟದಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; ನಷ್ಟದಲ್ಲಿ ಬರಲು ಕಾರಣಗಳೇನು; ನಷ್ಟ ಅನುಭವಿಸಲು ಕಾರಣರಾದವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ?

ಶ್ರೀ ಆರ್. ರೋಷನ್‌ಬೇಗ್ (ಸಣ್ಣ ಕೈಗಾರಿಕೆ ಹಾಗೂ ಹಜ್ ಸಚಿವರು):

ಅ) ಸೌಲಭ್ಯದ ಕೊರತೆ ಅಥವಾ ಕೆಲಸದ ಒತ್ತಡಗಳಿದ್ದಾಗ ಮಾತ್ರ ಉಪಗುತ್ತಿಗೆದಾರರಿಂದ ಕೆಲಸವನ್ನು ನಿರ್ವಹಿಸುತ್ತಿರುವುದು ನಿಜ.

ಆ) ಜಿ.ಟಿ.ಟಿ.ಸಿ. ಸಂಸ್ಥೆಯಲ್ಲಿ ಉತ್ಪಾದಿಸುವ ಬಿಡಿಭಾಗಗಳು ಅತ್ಯಂತ ಉತ್ಕೃಷ್ಟ, ತಾಂತ್ರಿಕತೆಯಿಂದ ಕೂಡಿರುತ್ತದೆ. ಯಾವ ಸಂದರ್ಭದಲ್ಲಿ ಯಂತ್ರೋಪಕರಣ ಸಾಮರ್ಥ್ಯದ ಕೊರತೆ ಅಥವಾ ಕೆಲಸದ ಒತ್ತಡದಿಂದ ಸೌಲಭ್ಯದ ಕೊರತೆ ಇರುವುದೋ ಅಂತಹ ಸಂದರ್ಭದಲ್ಲಿ ಉಪ ಗುತ್ತಿಗೆ ನೀಡುವುದು ಅನಿವಾರ್ಯವಾಗಿದೆ.

ಇ) ಜಿ.ಟಿ.ಟಿ.ಸಿ. ಸಂಸ್ಥೆಯ ಮೇಲಿನ ಕೆಲವಾರು ಆರೋಪಗಳ ತನಿಖೆಗಾಗಿ ಸರ್ಕಾರದ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಇವರ ನೇತೃತ್ವದಲ್ಲಿ ತನಿಖಾ ಸಮಿತಿಯನ್ನು ರಚಿಸಿದ್ದು, ಸದರಿ ಸಮಿತಿಯು ಈ ಬಗ್ಗೆ ಪರಿಶೀಲಿಸುವುದು.

ಈ) ಇಲ್ಲ.

ವಿವಿಧ ನಿಗಮ ಮಂಡಳಿಗಳಿಗೆ ಸದಸ್ಯರು ಮತ್ತು ನಿರ್ದೇಶಕರನ್ನು ನೇಮಕ ಮಾಡುವಾಗ ಜೈನ ಸಮುದಾಯವನ್ನು ನಿರ್ಲಕ್ಷಿಸಿರುವ ಬಗ್ಗೆ

2119 (2520) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿನ ವಿವಿಧ ಆಯೋಗ, ನಿಗಮ, ಮಂಡಳಿಗಳಿಗೆ ಅಲ್ಪಸಂಖ್ಯಾತರ ಪ್ರತಿನಿಧಿಗಳನ್ನು ನೇಮಕ ಮಾಡುವಾಗ ಅಲ್ಪಸಂಖ್ಯಾತ ವರ್ಗಗಳಲ್ಲಿನ ಜೈನ ಜನಾಂಗದವರನ್ನು ನೇಮಕ ಮಾಡದೇ ಇರುವುದನ್ನು ಸರ್ಕಾರವು ಗಮನಿಸಿದೆಯೇ; ಗಮನಿಸಿದ್ದಲ್ಲಿ, ಆ ಕುರಿತು ಸರ್ಕಾರದ ನಿಲುವುಗಳೇನು;

ಆ) ಅಲ್ಪಸಂಖ್ಯಾತರು ಅಂದರೆ ಕೇವಲ ಮುಸ್ಲಿಂ ಮತ್ತು ಕ್ರೈಸ್ತ ಜನಾಂಗದವರನ್ನು ಮಾತ್ರ ಆದ್ಯತೆಗೆ ಪರಿಗಣಿಸಿ ಜೈನ ಜನಾಂಗದವರನ್ನು ನಿರ್ಲಕ್ಷಿಸುವುದನ್ನು ಇನ್ನು ಮುಂದಾದರೂ ಸರಿಪಡಿಸಲಾಗುವುದೇ?